http://www.howtoexam.com

**C 111**

# First Year B.Com. Examination, Oct./Nov. 2009
## (R.S.S.)
## FINANCIAL ACCOUNTING – I

Dtate : 2-11-2009

Time : 2.00 p.m. to 5.00 p.m. Max. Marks : 90

PART – A

Answer **any three** questions. **Each** question carries **15** marks.

1. Explain Accounting concepts, conventions and principles.

2. From the following Trial Balance of Sri Prajwal, you are required to prepare Trading, Profit and Loss A/c for the year ending 31-03-2008 and a B/S as on that date.

| **Particulars** | **Debit** | **Credit** |
|---|---|---|
| | **Rs.** | **Rs.** |
| Stock on 1-4-2007 | 25,000 | |
| Purchases and Sales | 2,10,000 | 3,54,000 |
| Returns | 4,000 | 5,000 |
| Wages | 20,000 | |
| Carriage on purchases | 5,000 | |
| Electricity charges | 2,000 | |
| Discounts | 1,000 | 2,000 |
| General expenses | 15,000 | |
| Salaries | 10,000 | |
| Outstanding salaries | | 3,000 |
| Outstanding rent | | 1,000 |
| Depreciation | 15,000 | |
| Rent | 12,000 | |

**P.T.O.**

Download latest Placement Paper, puzzles, technical and aptitude question paper

http://www.howtoexam.com



| | | |
|---|---|---|
| Insurance | 3,000 | |
| Prepaid insurance | 1,000 | |
| Land and Buildings | 1,00,000 | |
| Furniture | 20,000 | |
| Debtors and creditors | 45,000 | 50,000 |
| B/R and B/P | 10,000 | 9,000 |
| Drawings and capital | 6,000 | 2,00,000 |
| Cash in hand | 2,000 | |
| Cash at bank | 38,000 | |
| Plant and machinery | 80,000 | |
| | **6,24,000** | **6,24,000** |

**Adjustments :**

a) Closing stock on 31-03-2008 Rs. 42,500.

b) Stock destroyed by fire was Rs. 4,000 and the insurance company accepted the claim only for Rs. 3,000.

c) Purchase include goods worth Rs. 1,000, purchased for private purpose.

d) Goods supplied by Mr. Nagesh worth Rs. 3,000 on 30-03-08 was not entered in the books.

3. From the following details of Mr. Prashanth, who has kept books of accounts under single entry prepare Trading, Profit and Loss Account and Balance Sheet.

| | **As on 1-1-2007 Rs.** | **As on 31-12-2007 Rs.** |
|---|---|---|
| Stock | 25,000 | 12,500 |
| Debtors | 62,500 | 87,500 |
| Cash | 6,250 | 10,000 |
| Furniture | 2,500 | 2,500 |
| Creditors | 37,500 | 43,750 |

HowToExam.com

Download latest Placement Paper, puzzles, technical and aptitude question paper

http://www.howtoexam.com



**Other details :**

Bad debts Rs. 1,250, Discount received Rs. 3,750, Discount allowed Rs. 2,500, Sundry expenses Rs. 7,500, Payment to creditors Rs. 1,12,500, Received from debtors Rs. 1,33,750, Drawings Rs. 10,000, Sales returns Rs. 3,750, Purchase returns Rs. 1,250, Charge depreciation on furniture at 5%.

4. The following is the summary cash transactions of Siddartha Sports Club for the year ended 31-12-2008.

| Receipts | Rs. | Payments | Rs. |
|---|---|---|---|
| To bal. b/d | 12,760 | By Rent and rates | 6,720 |
| ,, Entrace fees | 10,200 | ,, Wages | 9,800 |
| ,, Subscriptions | 64,000 | ,, Lighting charges | 2,880 |
| ,, Donations | 6,600 | ,, Lecturers fees | 17,400 |
| ,, Life membership fees | 10,000 | ,, Books | 8,520 |
| ,, Interest | 560 | ,, Office expenses | 18,000 |
| ,, Profit on entertainment | 1,680 | ,, 3% fixed deposit on 1-7-2008 | 32,000 |
| | | ,, Cash at bank | 9,680 |
| | | ,, Cash in hand | 800 |
| | **1,05,800** | | **1,05,800** |

**Adjustments :**

In the beginning of the year the club purchased books worth Rs. 80,000, and furniture worth Rs. 34,000. Subscriptions in arrears at the beginning of the year amounted to Rs. 1,400 and at the end of the year Rs. 1,800 and six months rent Rs. 2,400 was due both at the beginning and end of the year.

Prepare Income and Expenditure A/c of the club for the year ended 31-12-2008 and its B/S on that date, after writing off Rs. 2,000 and Rs. 4,520 on furniture and book respectively.

Download latest Placement Paper, puzzles, technical and aptitude question paper

http://www.howtoexam.com



5. Gopal Electronics, Bangalore consigned 2500 units of electronic components @ Rs. 300 each on consignment basis to Mr. Naveen of Mysore on 1-1-2004.

Gopal Electronics paid Rs. 5,000 for packing, Rs. 20,000 for freight charges and Rs. 10,000 towards insurance. During transit 100 units were destroyed and insurance claim was settled @ Rs. 30,000 and was directly paid to consignor.

Mr. Naveen took delivery of the consignment on 5-1-2004 and accepted a bill for Rs. 2,50,000 for 3 months. On 31-3-2004, Naveen reported as follows :

a) 1500 units were sold @ Rs. 420 each.

b) 700 units were sold @ 450 each on credit.

c) Expenses incurred by him were :

Unloading charges Rs. 7,200, Godown Rent Rs. 6,000, Advertising Rs. 5,000 and sales men salary rs. 15,000.

Mr. Naveen entitled to an ordinary commission at 5% and delcredere commission at 2½ % on all sales.

Consignee remitted the balance due from him through a bank draft.

You are required to prepare :

i) Consignment A/c

ii) Consignee's A/c

iii) Goods damaged in transit a/c in the books of consignor.

iv) Pass J/E in the books of consignee.

## PART – B

Answer **any 3** questions out of **5** questions. **Each** carries **10** marks.

6. Bhavani of Banglore and Maheswari of Mysore enters into joint venture for dealing in silk sarees. Bhavani has to purchase and Maheswari has to make sales on joint venture basis. They have to share profit equally. On 1-7-2007 Bhavani purchased Rs. 6,10,000 worth of silk sarees and sent them to Maheswari. Bhavani paid Rs. 12,000 as freight and Rs. 8,000 towards packing charges. On 10-7-2007 Bhavani drew a bill for Rs. 3,00,000 for 3 months and it was accepted by Maheswari. Bhavani discounted the bill for Rs. 2,94,000 on 20-7-2007.

Maheswari sold all sarees for Rs. 7,66,000 and she paid Rs. 4,500 for advertising, Rs. 10,500 for wages and Rs. 8,000 for travelling expenses. Maheswari sent

Download latest Placement Paper, puzzles, technical and aptitude question paper

http://www.howtoexam.com



bank draft for the balance due to Bhavani.

Prepare Joint Venture A/c and Mahesvari's A/c in the books of Bhavani.

7. TVS Roadlines purchased a 'Star Truck' on 1-4-2001 for Rs. 8,00,000. On 1-10-2001, another new truck 'Road King Truck' purchased for Rs. 11,60,000.

   On 1-10-2003, it sold 'Star Truck' for 5,25,000 and on the same day 'Road Master Truck' was purchased for 13,00,000.

   It was decided to depreciate all trucks @ 20% p.a. on W.D.V. method. Accounts are closed on 31-December each year.

   Prepare Truck A/c for 3 years along with working notes.

8. Prepare Manufacturing Account from the following :

| | **Rs.** |
|---|---|
| Opening stock of raw material | 6,40,000 |
| Carriage on purchase of R.M. | 5,000 |
| Purchase of R.M. | 11,20,000 |
| Purchase Returns | 20,000 |
| Plant and machinery | 6,00,000 |
| Manufacturing wages | 60,000 |
| Fire insurance (60% factory) | 6,000 |
| Rent and Taxes (40% to office) | 8,000 |
| Supervisor salary (75% to factory) | 80,000 |
| Factory lighting | 8,000 |
| Power (20% to office) | 18,000 |

   Charge 10% depreciation on plant and machinery. Manufacturing wages o/s Rs. 7,000. Stock of raw materials at the end was Rs. 1,80,000.

HowToExam.com

Download latest Placement Paper, puzzles, technical and aptitude question paper

http://www.howtoexam.com



9. Pass journal entries to rectify the following errors :
   1) An amount of Rs. 200 withdrawn by the proprietor for his personal use has been debited to Trade Expenses A/c.
   2) Rs. 3,000 paid on account of salary to the cashier stands debited to his personal account.
   3) A bill for Rs. 1,500 for sale of old furniture to Ranga was entered in the Sales Day Book.
   4) An amount of Rs. 1,500 paid for wages is posted twice to the debit of wages account.
   5) The monthly total sales book was over tallied by Rs. 110.
   6) A balance of Rs. 900 due from customer was omitted from the list of Sundry debtors.
   7) A purchase of Rs. 2,000 from Raju was totally omitted in the books.

10. Jounalise the following transactions in the books of Jayaraj.
   i) Received a promissory note for Rs. 4,000 from Balaram.
   ii) His acceptance of Rs. 8,000 to Bajaj was met by his banker.
   iii) Accepted 3 months draft for Rs. 4,000 drawn on him by Raghu in favour of Ranganath.
   iv) Gave acceptance to Madhu for Rs. 7,800 in full settlement of Rs. 8,000 due to him.
   v) Received a bill for Rs. 5,000 from Prashanth.

HowToExam.com

## PART – C

Answer **any three** questions. **Each** carries **5** marks.

11. Give differences between consignment and joint venture.

12. What are the advantages of single entry system ?

13. Give five differences between Receipts and Payments A/c and Income and Expenditure A/c.

14. What are the causes for depreciation ?

15. Write a note on 'Journal'.

Download latest Placement Paper, puzzles, technical and aptitude question paper

http://www.howtoexam.com



## ಕನ್ನಡ ವಿಭಾಗ

### ವಿಭಾಗ - ಎ

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೂ **15** ಅಂಕಗಳು.

1. ಲೆಕ್ಕಾಚಾರದ ಪರಿಕಲ್ಪನೆ, 'ಕನ್‌ವೆನ್‌ಶನ್' ಮತ್ತು ತತ್ವಗಳು ಇವುಗಳ ಬಗ್ಗೆ ವಿಶದವಾಗಿ ತಿಳಿಸಿ.

2. ಈ ಕೆಳಗೆ ಕೊಟ್ಟಿರುವ ಶ್ರೀ ಪ್ರಜ್ವಲ್ ರವರ ತಾಳೆ ಪಟ್ಟಿಯಿಂದ, 31-03-2008 ರಂದು ಅಂತ್ಯವಾಗುವ ವ್ಯಾಪಾರ ಮತ್ತು ಲಾಭ ಮತ್ತು ನಷ್ಟ ಖಾತೆ ಹಾಗೂ ಅಂದು ಇದ್ದಂತೆ ಆಸ್ತಿ-ಜವಾಬ್ದಾರಿ ಪಟ್ಟಿಗಳನ್ನು ತಯಾರಿಸಿ.

| ವಿವರಗಳು | ರೂ. | ರೂ. |
|---|---|---|
| ವ್ಯಾಪಾರದಲ್ಲಿ ಸರಕು 01-04-2007 | 25,000 | |
| ಖರೀದಿ ಮತ್ತು ಮಾರಾಟ | 2,10,000 | 3,54,000 |
| ಮಾರಾಟ ಮತ್ತು ಖರೀದಿ ವಾಪಸಾತಿ | 4,000 | 5,000 |
| ಮಜೂರಿ | 20,000 | |
| ಸರಕು ಖರೀದಿ ಸಾಗಾಣಿಕೆ ವೆಚ್ಚ | 5,000 | |
| ವಿದ್ಯುಚ್ಛಕ್ತಿ ವೆಚ್ಚ | 2,000 | |
| ಸೋಡಿ | 1,000 | 2,000 |
| ಸಾಮಾನ್ಯ ವೆಚ್ಚಗಳು | 15,000 | |
| ಸಂಬಳ | 10,000 | |
| ಸಂಬಳ ಬಾಕಿ ಇರುವುದು | | 3,000 |
| ಬಾಡಿಗೆ ಬಾಕಿ ಇರುವುದು | | 1,000 |
| ಸವಕಳಿ | 15,000 | |
| ಬಾಡಿಗೆ | 12,000 | |
| ಮುಂಗಡ ವಿಮೆ | 1,000 | |
| ವಿಮೆ | 3,000 | |
| ಭೂಮಿ ಮತ್ತು ಕಟ್ಟಡಗಳು | 100000 | |
| ಪೀಠೋಪಕರಣ | 20,000 | |

Download latest Placement Paper, puzzles, technical and aptitude question paper

http://www.howtoexam.com



| | | |
|---|---|---|
| ಋಣಿಗಳು ಮತ್ತು ಧನಿಗಳು | 45,000 | 50,000 |
| ಬರಬೇಕಾದ ಮತ್ತು ಕೊಡಬೇಕಾದ ಹುಂಡಿಗಳು | 10,000 | 9,000 |
| ಸ್ವಂತ ವೆಚ್ಚ ಮತ್ತು ಬಂಡವಾಳ ಖಾತೆ | 6,000 | 2,00,000 |
| ಕೈಯಲ್ಲಿ ನಗದು | 2,000 | |
| ಬ್ಯಾಂಕಿನಲ್ಲಿ ನಗದು | 38,000 | |
| ಸ್ಥಾವರ ಮತ್ತು ಯಂತ್ರಗಳು | 80,000 | |
| | **6,24,000** | **6,24,000** |

**ಹೊಂದಾಣಿಕೆಗಳು :**

1) ಅಂತಿಮ ಸರಕು ದಿನಾಂಕ 31-3-2008 ರಂದು ರೂ. 42,500.
2) ಬೆಂಕಿ ಅಪಘಾತದಲ್ಲಿ ನಷ್ಟವಾದ ಸರಕು ರೂ. 4,000; ವಿಮಾ ಕಂಪನಿಯವರು ರೂ. 3,000 ಗಳನ್ನು ಕೊಡಲು ಒಪ್ಪಿದ್ದಾರೆ.
3) ವೈಯಕ್ತಿಕ ಉದ್ದೇಶಗಳಿಗಾಗಿ ಕೊಂಡ ಸರಕು ರೂ. 1,000 ಖರೀದಿಯಲ್ಲಿ ಸೇರಿದೆ.
4) ದಿನಾಂಕ 30-3-2008 ರಂದು ಶ್ರೀ ನಾಗೇಶ್‌ರವರು ಸರಬರಾಜು ಮಾಡಿದ ಸರಕು ರೂ. 3,000. ಈ ಬಗ್ಗೆ ಲೆಕ್ಕ ಪುಸ್ತಕದಲ್ಲಿ ದಾಖಲೆ ಬಂದಿಲ್ಲ.

3. ಪ್ರಶಾಂತ್‌ರವರ ಏಕ ನಮೂದು ಪುಸ್ತಕಗಳಿಂದ ತೆಗೆದ ಈ ಕೆಳಗಿನ ವಿವರಗಳಿಂದ ವ್ಯಾಪಾರ, ಲಾಭ ಮತ್ತು ನಷ್ಟದ ಖಾತೆ ಮತ್ತು ಆಸ್ತಿ ಜವಾಬ್ದಾರಿ ಪಟ್ಟಿಯನ್ನು ತಯಾರಿಸಿ.

| | **1-1-2007** | **31-12-2007** |
|---|---|---|
| | **ರೂ.** | **ರೂ.** |
| ಸರಕು | 25,000 | 12,500 |
| ಋಣಿಗಳು | 62,500 | 87,500 |
| ನಗದು | 6,250 | 10,000 |
| ಪೀಠೋಪಕರಣಗಳು | 2,500 | 2,500 |
| ಧನಿಗಳು | 37,500 | 43,750 |

**ಇತರೆ ವಿವರಗಳು :**

ಕರಡು ಸಾಲ ರೂ. 1,250, ಸೋಡಿ ಬಂದದ್ದು ರೂ. 3,750, ಸೋಡಿ ಬಿಟ್ಟಿದ್ದು ರೂ. 2,500, ಇತರೇ ಖರ್ಚುಗಳು ರೂ. 7,500, ಧನಿಗಳಿಗೆ ಕೊಟ್ಟ ನಗದು ರೂ. 1,12,500, ಋಣಿಗಳಿಂದ ಬಂದ ನಗದು ರೂ. 1,33,750, ಸ್ವಂತ ವೆಚ್ಚ ರೂ. 10,000, ಮಾರಾಟ ವಾಪಸಾತಿ ರೂ. 3,750, ಖರೀದಿ ವಾಪಸಾತಿ ರೂ. 1,250. ಪೀಠೋಪಕರಣಗಳ ಮೇಲೆ ಶೇ. 5 ರಷ್ಟು ಸವಕಳಿ ತೆಗೆಯಿರಿ.

Download latest Placement Paper, puzzles, technical and aptitude question paper

http://www.howtoexam.com



4. ದಿನಾಂಕ 31-12-2008 ಕ್ಕೆ ಕೊನೆಯಾಗುವ ವರ್ಷದ ಸಿದ್ಧಾರ್ಥ ಕ್ಲಬ್‌ನ ನಗದು ವಹಿವಾಟುಗಳ ವಿವರಗಳನ್ನು ಈ ಕೆಳಗೆ ಕೊಟ್ಟಿದೆ:

| ಆಯ | ರೂ. | ವ್ಯಯ | ರೂ. |
|---|---|---|---|
| ಆರಂಭದ ಶಿಲ್ಕು | 12,760 | ಬಾಡಿಗೆ ಮತ್ತು ತೆರಿಗೆ | 6,720 |
| ಪ್ರವೇಶ ಶುಲ್ಕ | 10,200 | ಕೂಲಿ | 9,800 |
| ಚಂದಾ ಹಣ | 64,000 | ವಿದ್ಯುತ್ ಶಕ್ತಿ ವೆಚ್ಚ | 2,880 |
| ದೇಣಿಗೆ | 6,600 | ಉಪನ್ಯಾಸಕರ ಸಂಭಾವನೆ | 17,400 |
| ಆಜೀವ ಸದಸ್ಯತ್ವ ಶುಲ್ಕ | 10,000 | ಪುಸ್ತಕಗಳು | 8,520 |
| ಬಡ್ಡಿ | 560 | ಕಛೇರಿ ವೆಚ್ಚ | 18,000 |
| ಮನರಂಜನೆಯಿಂದ ಆದಾಯ | 1,680 | ನಿಗದಿತ ಠೇವಣಿ ಶೇ. 3ರಂತೆ 1-7-2008 ರಿಂದ | 32,000 |
| | | ಬ್ಯಾಂಕಿನ ಶಿಲ್ಕು | 9,680 |
| | | ನಗದು ಶಿಲ್ಕು | 800 |
| | **1,05,800** | | **1,05,800** |

ವರ್ಷದ ಪ್ರಾರಂಭದಲ್ಲಿ ಕ್ಲಬ್ ರೂ. 80,000 ಮೌಲ್ಯದ ಪುಸ್ತಕಗಳನ್ನು ಹಾಗೂ ರೂ. 34,000 ಮೌಲ್ಯದ ಪೀಠೋಪಕರಣಗಳನ್ನು ಹೊಂದಿತ್ತು. ವರ್ಷದ ಆರಂಭದಲ್ಲಿ ಬಾಕಿ ಇದ್ದ ಚಂದಾ ರೂ. 1,400 ಮತ್ತು ವರ್ಷದ ಕೊನೆಯಲ್ಲಿ ರೂ. 1,800 ಹಾಗೂ 6 ತಿಂಗಳ ಬಾಡಿಗೆ ರೂ. 2,400 ವರ್ಷದ ಪ್ರಾರಂಭದಲ್ಲಿ ಹಾಗೂ ಕೊನೆಯಲ್ಲೂ ಬಾಕಿ ಉಳಿದಿತ್ತು. ದಿನಾಂಕ 31-12-2008 ಕ್ಕೆ ಕೊನೆಯಾದ ವರ್ಷದ ಕ್ಲಬ್‌ನ ಆದಾಯ ವೆಚ್ಚದ ಖಾತೆಯನ್ನು ಹಾಗೂ ಆಸ್ತಿ-ಹೊಣೆ ಪಟ್ಟಿಯನ್ನು ಅನುಕ್ರಮವಾಗಿ ಪೀಠೋಪಕರಣ ಹಾಗೂ ಪುಸ್ತಕಗಳ ಮೇಲೆ ರೂ. 2,000 ಹಾಗೂ ರೂ. 4,520 ಸವಕಳಿ ತೆಗೆಯುವುದರೊಂದಿಗೆ ತಯಾರಿಸಿ.

5. ಗೋಪಾಲ್ ಎಲೆಕ್ಟ್ರಾನಿಕ್ಸ್, ಬೆಂಗಳೂರು ಇವರು 'ಸರಕು ರವಾನೆ' ಆಧಾರದಲ್ಲಿ 2500 ಯೂನಿಟ್ ಎಲೆಕ್ಟ್ರಾನಿಕ್ ಉಪಕರಣಗಳನ್ನು 1-1-2004 ರಂದು ಮೈಸೂರಿನ ನವೀನರವರಿಗೆ ಪ್ರತಿಯೊಂದು ಯೂನಿಟ್‌ಗೆ 300 ರೂ. ನಂತೆ ರವಾನಿಸಿದರು.

ಗೋಪಾಲ್ ಎಲೆಕ್ಟ್ರಾನಿಕ್ಸ್‌ರವರು ಪ್ಯಾಕಿಂಗ್‌ಗೆ 5,000 ರೂ., ರೈಲ್ವೆ ಬಾಡಿಗೆ 20,000 ರೂ. ಮತ್ತು ವಿಮೆಗಾಗಿ 10,000 ರೂ. ಪಾವತಿಸಿದರು. ಸಾಗಾಣಿಕೆಯ ಸಂದರ್ಭದಲ್ಲಿ 100 ಯೂನಿಟ್‌ಗಳು ಹಾನಿಗೊಳಗಾದವು. ವಿಮಾ ಪರಿಹಾರವಾಗಿ 30,000 ರೂ. ಗಳನ್ನು ಸರಕು ರವಾನೆದಾರನಿಗೆ ನೇರವಾಗಿ ಸಂದಾಯವಾಯಿತು.

Download latest Placement Paper, puzzles, technical and aptitude question paper

http://www.howtoexam.com



ರವಾನಿಸಿದ ಸರಕುಗಳನ್ನು 5-1-04 ರಂದು ನವೀನರವರು ಪಡೆದುಕೊಂಡರು ಹಾಗೂ 3 ತಿಂಗಳಿಗೆ ಬರೆದ 2,50,000 ರೂ. ಗಳ ಹುಂಡಿಗೆ ಒಪ್ಪಿಗೆ ನೀಡಿದರು. 31-3-04 ರಂದು ನವೀನರವರು ಕೆಳಗಿನಂತೆ ವರದಿ ಕಳುಹಿಸಿದರು :

a) 1500 ಯೂನಿಟ್‌ಗಳನ್ನು ಪ್ರತಿಯೊಂದಕ್ಕೂ 420 ರೂ. ನಂತೆ ಮಾರಿದರು.

b) 700 ಯೂನಿಟ್‌ಗಳನ್ನು ಪ್ರತಿಯೊಂದಕ್ಕೂ 450 ರೂ. ರಂತೆ ಉದ್ದರಿಗೆ ಮಾರಿದರು.

c) ಅವರು ಮಾಡಿದ ಖರ್ಚುಗಳು :

ಸರಕು ಬಿಡಿಸಿಕೊಂಡ ಖರ್ಚು 7,200 ರೂ., ದಾಸ್ತಾನು ಮಳಿಗೆಯ ಬಾಡಿಗೆ ರೂ. 6,000 ಜಾಹೀರಾತಿಗೆ ರೂ. 5,000 ಮತ್ತು ವಿಕ್ರಯದಾರನ ಸಂಬಳ ರೂ. 15,000. ನವೀನರವರು ಶೇ. 5 ರಂತೆ ಸಾಮಾನ್ಯ ದಳ್ಳಾಳಿ ಹಾಗೂ ಶೇ. 2½ ಉದ್ದರಿ ದಳ್ಳಾಳಿ ಪಡೆಯಲು ಅರ್ಹರು.

ರವಾನಾ ಪ್ರತಿನಿಧಿಯು ಬಾಕಿ ಮೊತ್ತವನ್ನು ಬ್ಯಾಂಕಿನ ಡ್ರಾಫ್ಟ್ ಮೂಲಕ ಕಳುಹಿಸಿದನು.

ಈ ಕೆಳಗಿನ ಖಾತೆಯನ್ನು ಸರಕು ರವಾನೆದಾರರ ಪುಸ್ತಕದಲ್ಲಿ ತಯಾರಿಸಿ :

1) ಸರಕು ರವಾನೆಯ ಖಾತೆ

2) ರವಾನಾ ಪ್ರತಿನಿಧಿ ಖಾತೆ

3) ಸಾಗಾಣಿಕೆಯಲ್ಲಿ ಹಾನಿಯಾದ ಸರಕಿನ ಖಾತೆ

4) ರವಾನಾ ಪ್ರತಿನಿಧಿಯ ಪುಸ್ತಕಗಳಲ್ಲಿ ರೋಜು ದಾಖಲೆಗಳನ್ನು ಬರೆಯಿರಿ.

## ವಿಭಾಗ - ಬಿ

ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗಳಿಗೆ **10** ಅಂಕಗಳು.

6. ಬೆಂಗಳೂರಿನ ಭವಾನಿಯವರು ಮತ್ತು ಮೈಸೂರಿನ ಮಹೇಶ್ವರಿಯವರು ರೇಷ್ಮೆಸೀರೆಗಳ ವ್ಯವಹಾರಕ್ಕಾಗಿ ಜಂಟಿ ಉದ್ಯಮವನ್ನು ಪ್ರವೇಶಿಸಿದರು. ಕೂಡು ಉದ್ಯಮದ ಆಧಾರದಲ್ಲಿ ಭವಾನಿಯವರು ಖರೀದಿಸಬೇಕು ಮತ್ತು ಮಹೇಶ್ವರಿಯವರು ಮಾರಬೇಕು. ಅವರು ಲಾಭವನ್ನು ಸಮನಾಗಿ ಹಂಚಿಕೊಳ್ಳಬೇಕು.

1-7-07 ರಂದು ಭವಾನಿಯವರು 6,10,000 ರೂ. ಮೌಲ್ಯದ ರೇಷ್ಮೆ ಸೀರೆಗಳನ್ನು ಖರೀದಿಸಿ ಮಹೇಶ್ವರಿಗೆ ಕಳುಹಿಸಿದರು. ಭವಾನಿಯವರು 12,000 ರೂ. ಸಾಗಾಣಿಕೆ ವೆಚ್ಚವಾಗಿ ಮತ್ತು 8,000 ರೂ. ಪ್ಯಾಕಿಂಗ್ ವೆಚ್ಚವಾಗಿ ಪಾವತಿಸಿದರು.

10-7-07 ರಂದು ಭವಾನಿ ಬರೆದ 3 ತಿಂಗಳ 3,00,000 ರೂ. ಗಳ ಹುಂಡಿಗೆ ಮಹೇಶ್ವರಿ ಒಪ್ಪಿಗೆ ನೀಡಿದರು. ನಂತರ 20-7-07 ರಂದು ಭವಾನಿಯು 2,94,000 ರೂ. ಗಳಿಗೆ ಹುಂಡಿಯನ್ನು ಸೋಡಿಗೆ ಮುರಿಸಿದರು.

ಮಹೇಶ್ವರಿಯವರು ಎಲ್ಲಾ ಸೀರೆಗಳನ್ನು 7,66,000 ರೂ. ಗಳಿಗೆ ಮಾರಾಟ ಮಾಡಿದರು ಮತ್ತು ಜಾಹೀರಾತಿಗೆ ರೂ. 4,500, ಕೂಲಿಗಾಗಿ ರೂ. 10,500 ಹಾಗೂ ಪ್ರಯಾಣದ ವೆಚ್ಚವಾಗಿ ರೂ. 8,000 ಪಾವತಿಸಿದರು.

ಮಹೇಶ್ವರಿಯವರು ಬಾಕಿ ಮೊತ್ತವನ್ನು ಬ್ಯಾಂಕ್ ಡ್ರಾಫ್ಟ್ ಮೂಲಕ ಭವಾನಿಗೆ ಕಳುಹಿಸಿದರು. ಭವಾನಿಯವರ ಪುಸ್ತಕದಲ್ಲಿ ಜಂಟಿ ಉದ್ಯಮ ಖಾತೆಯನ್ನು ಮತ್ತು ಸಹ ಉದ್ಯಮಿ ಮಹೇಶ್ವರಿ ಖಾತೆಯನ್ನು ತಯಾರಿಸಿರಿ.

Download latest Placement Paper, puzzles, technical and aptitude question paper

http://www.howtoexam.com



7. ಟಿ.ವಿ. ಎ. ಸ್ ರೋಡ್ ಲೈನ್ಸ್ ರವರು 1-4-2001 ರಂದು 'ಸ್ಟಾರ್ ಟ್ರಕ್' ನ್ನು 8,00,000 ರೂ. ಗಳಿಗೆ ಖರೀದಿಸಿದರು. ದಿ. 1-10-2001 ರಂದು 'ರೋಡ್ ಕಿಂಗ್ ' ಎಂಬ ನೂತನ ಟ್ರಕ್ಕನ್ನು 11,60,000 ರೂ. ಗಳಿಗೆ ಖರೀದಿಸಿದರು. ದಿ. 1-10-2003 ರಂದು ಸ್ಟಾರ್ ಟ್ರಕ್ಕನ್ನು 5,25,000 ರೂ. ಗಳಿಗೆ ಮಾರಿದರು ಮತ್ತು ಅದೇ ದಿನಾಂಕದಂದು 'ರೋಡ್ ಮಾಸ್ಟರ್' ಎಂಬ ಹೊಸ ಟ್ರಕ್ಕನ್ನು 13,00,000 ರೂ. ಗಳಿಗೆ ಖರೀದಿಸಿದರು. ಎಲ್ಲಾ ಟ್ರಕ್‌ಗಳ ಮೇಲೆ ಸಾಲಿಯಾನ ಶೇ. 20 ರಂತೆ ಶಿಲ್ಕು ಇಳುವರಿ ಪದ್ಧತಿಯಲ್ಲಿ ಸವಕಳಿ ತೆಗೆಯಲು ನಿರ್ಧರಿಸಿದರು. ಖಾತೆಗಳನ್ನು ಪ್ರತಿ ವರ್ಷ 31 ನೇ ಡಿಸಂಬರ್‌ಗೆ ಮುಕ್ತಾಯ ಗೊಳಿಸುವರು.

ಟಿಪ್ಪಣಿಗಳ ಸಮೇತ ಟ್ರಕ್ಕುಗಳ ಖಾತೆಯನ್ನು ಮೂರು ವರ್ಷಗಳಿಗೆ ತಯಾರಿಸಿ.

8. ಕೆಳಕಂಡ ವಿವರಗಳಿಂದ ಉತ್ಪಾದನ ಖಾತೆಯನ್ನು ತಯಾರಿಸಿ.

| | ರೂ. |
|---|---|
| ಪ್ರಾರಂಭಿಕ ಕಚ್ಚಾ ವಸ್ತುಗಳು | 6,40,000 |
| ಕಚ್ಚಾ ವಸ್ತುಗಳ ಖರೀದಿಸಿದ ಸಾಗಣೆ ವೆಚ್ಚ | 5,000 |
| ಕಚ್ಚಾ ವಸ್ತುಗಳ ಖರೀದಿ | 11,20,000 |
| ಹೊರ ಪಾವತಿ | 20,000 |
| ಸ್ಥಾವರ ಮತ್ತು ಯಂತ್ರೋಪಕರಣಗಳು | 6,00,000 |
| ಉತ್ಪಾದನ ಕೂಲಿ | 60,000 |
| ಬೆಂಕಿ ವಿಮೆ (ಶೇ. 60 ಕಾರ್ಖಾನೆ) | 6,000 |
| ಬಾಡಿಗೆ ಹಾಗೂ ತೆರಿಗೆ (ಶೇ. 40 ರ ಕಚೇರಿಗೆ) | 8,000 |
| ಮೇಲ್ವಿಚಾರಕರ ಸಂಬಳ (ಶೇ. 75 ಕಾರ್ಖಾನೆ) | 80,000 |
| ಕಾರ್ಖಾನೆಯ ಬೆಳಕು | 8,000 |
| ಇಂಧನ | 18,000 |

ಸ್ಥಾವರ ಮತ್ತು ಯಂತ್ರೋಪಕರಣಗಳ ಮೇಲೆ ಶೇ. 10 ರಷ್ಟು ಸವಕಳಿ, ಉತ್ಪಾದನಾ ಕೂಲಿ ರೂ. 7,000 ಬಾಕಿ, ಅಂತಿಮ ಸರಕು ಶಿಲ್ಕು 1,80,000.

9. ಲೆಕ್ಕ ಪುಸ್ತಕದಲ್ಲಾದ ಈ ಕೆಳಗಿನ ತಪ್ಪುಗಳನ್ನು ರೋಜು ಪುಸ್ತಕದ ಮೂಲಕ ಸರಿಪಡಿಸಿ.

1) ಸಂಸ್ಥೆಯ ಮಾಲಿಕ ಸ್ವಂತ ಉಪಯೋಗಕ್ಕಾಗಿ ತೆಗೆದ 200 ರೂ. ಗಳನ್ನು ವ್ಯಾಪಾರದ ಖರ್ಚೆಂದು ಬರೆಯಲಾಗಿದೆ.

2) ಖಜಾಂಚಿಗೆ ಕೊಟ್ಟ ಸಂಬಳ ರೂ. 3,000 ವನ್ನು ಆತನ ಸ್ವಂತ ಖಾತೆಗೆ ಖರ್ಚು ಹಾಕಲಾಗಿದೆ.

Download latest Placement Paper, puzzles, technical and aptitude question paper

http://www.howtoexam.com



3) ಹಳೆ ಪೀಠೋಪಕರಣಗಳನ್ನು ರೂ. 1,500 ಕ್ಕೆ ರಂಗನಿಗೆ ಮಾರಿದ್ದನ್ನು ಮಾರಾಟ ರೋಜು ಪುಸ್ತಕದಲ್ಲಿ ಬರೆಯಲಾಗಿದೆ.

4) ರೂ. 1,500 ಕೂಲಿಗಾಗಿ ವೆಚ್ಚವಾಗಿದೆ. ಇದನ್ನು ಕೂಲಿ ಖಾತೆಯಲ್ಲಿ ಎರಡು ಸಲ ಬರೆಯಲಾಗಿದೆ.

5) ಮಾರಾಟ ರೋಜು ಪುಸ್ತಕದ ಮಾಸಿಕ ಮೊತ್ತ 110 ರೂ. ಗಳನ್ನು ಹೆಚ್ಚಾಗಿ ತೋರಿಸಲಾಗಿದೆ.

6) ಒಬ್ಬ ಗಿರಾಕಿಯಿಂದ ಬರಬೇಕಾದ ರೂ. 900 ದೇಣಿದಾರರ ಪಟ್ಟಿಯಲ್ಲಿ ಒಟ್ಟು ಹೋಗಿದೆ.

7) ರಾಜುವಿನಿಂದ ಮಾಡಿದ ಖರೀದಿ ಮೊಬಲಗು ರೂ. 2,000 ಲೆಕ್ಕದಲ್ಲಿ ಸಂಪೂರ್ಣ ಬಿಟ್ಟು ಹೋಗಿದೆ.

10. ಈ ಕೆಳಗಿನ ವ್ಯವಹಾರಗಳನ್ನು ಜಯರಾಜನವರ ರೋಜು ಪುಸ್ತಕದಲ್ಲಿ ಬರೆಯಿರಿ.

1) ಬಲರಾಮನಿಂದ ರೂ. 4,000 ಗಳ 'ಪ್ರಾಮಿಸರಿ ನೋಟ' ನ್ನು ಪಡೆಯಲಾಗಿದೆ.

2) ಇವರ ರೂ. 8,000 ಗಳ ಒಪ್ಪಿಗೆಯನ್ನು ಬ್ಯಾಂಕಿನವರು ಪಾವತಿಸಿದ್ದಾರೆ.

3) ರಘು ಅವರ ಮೇಲೆ ಬರೆದ 3 ತಿಂಗಳ 'ಡ್ರಾಫ್ಟ್' ರೂ. 4,000 ಗಳ ಒಪ್ಪಿಗೆಯನ್ನು ರಂಗನಾಥರವರ ಪರವಾಗಿ ಒಪ್ಪಿಕೊಳ್ಳಲಾಗಿದೆ.

4) ಮಧುರವರಿಗೆ ಕೊಡಬೇಕಾಗಿದ್ದ ರೂ. 8,000 ಗಳಿಗೆ, ರೂ. 7,800 ಗಳ ಒಪ್ಪಿಗೆ ಪತ್ರವನ್ನು, ಒಪ್ಪಿಕೊಳ್ಳಲಾಗಿದೆ.

5) ರೂ. 5,000 ಗಳ ಹುಂಡಿಯನ್ನು ಪ್ರಶಾಂತರವರಿಂದ ಪಡೆಯಲಾಗಿದೆ.

**ವಿಭಾಗ – ಸಿ**

ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೆ **5** ಅಂಕಗಳು.

11. ಜಂಟಿ ಉದ್ಯಮ ಮತ್ತು ಮಾರಾಟಕ್ಕೆ ಕಳುಹಿಸಿಕೊಟ್ಟ ಖಾತೆಗಳ ವ್ಯತ್ಯಾಸಗಳನ್ನು ಬರೆಯಿರಿ.

12. ಏಕನಮೂದು ಪದ್ಧತಿಯ ಉಪಯೋಗಗಳನ್ನು ಬರೆಯಿರಿ.

13. ಆಯವ್ಯಯ ಮತ್ತು ಆದಾಯ ಮತ್ತು ವೆಚ್ಚ ಖಾತೆಗಳಿಗೆ ಇರುವ ವ್ಯತ್ಯಾಸಗಳನ್ನು ಬರೆಯಿರಿ.

14. ಸವಕಳಿಗೆ ಕಾರಣಗಳನ್ನು ತಿಳಿಸಿ.

15. ರೋಜು ಪುಸ್ತಕದ ಬಗ್ಗೆ ಟಿಪ್ಪಣಿ ಬರೆಯಿರಿ.

———————

Download latest Placement Paper, puzzles, technical and aptitude question paper